<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ.20925-2024

ಸಿಡಬ್ಲೂ - 4ಪಿಡಬ್ಲೂ-4

| | |
|---|---|
| ಸಾಕ್ಷಿದಾರರ ಹೆಸರು | : ಸುರೇಶ ಎಸ್ |
| ತಂದೆಯ ಹೆಸರು | : ಸುಬ್ರಮಣ್ಯ |
| ವಯಸ್ಸು | : 40 ವರ್ಷ |
| ಕೆಲಸ | : ಪೂಜಾರಿ |
| ವಾಸ | : ಚಿಕ್ಕಬಳ್ಳಾಪುರ |

<u>ಸಾಕ್ಷಿಯನ್ನು ದಿನಾಂಕಃ 20-12-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ಆರೋಪಿ ಗೊತ್ತಿಲ್ಲ. 2015 ರಲ್ಲಿ ನಾನು ಚಿಕ್ಕಬಳ್ಳಾಪುರದ ನಾಯಂಡನಹಳ್ಳಿಯಲ್ಲಿ ಮೊಬೈಲ್ ಅಂಗಡಿಯನ್ನು ಇಟ್ಟುಕೊಂಡಿದ್ದೇನು. ಆ ಸಮಯದಲ್ಲಿ ಚಾಸಾ 5 ರವರು ತಮ್ಮ ಕಡೆಯಿಂದ ಮೊಬ್ಯಲ್ ರಿಚಾರ್ಜ ಮಾಡುವ ಸೀಮ್ ನ್ನು ಕೊಟಿದ್ದರು. 2018 ನಂಬರ್ ನಲ್ಲಿ ನಾನು ಅಂಗಡಿಯನ್ನು ಮುಚ್ಚಿರುತ್ತೇನೆ. ಆರೋಪಿಯು ನನಗೆ ಗೊತ್ತಿಲ್ಲ. ಆರೋಪಿಯ ವಿರುದ್ಧ ಹೊರರಾಜ್ಯಕ್ಕೆ ವಿವಿಐಪಿ ಸೀಮ್ ಗಳನ್ನು ಮಾರಾಟ ಮಾಡಿರುವ ಬಗ್ಗೆ ಪ್ರಕರಣದ ದಾಖಲಾಗಿರುವ ವಿಚಾರ ಗೊತ್ತಾಗಿರುತ್ತದೆ. ಈ ವಿಚಾರವನ್ನು ನನಗೆ ಚಾಸಾ 5 ರವರು ತಿಳಿಸಿರುತ್ತಾರೆ. ಈ ಬಗ್ಗೆ ನಾನು ಸಿಐಡಿ ರವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಡೆಮೋ ನಂ. 9108041257 ಆಗಿರುತ್ತದೆ. ನಾನು ಅಂಗಡಿಯನ್ನು ಮುಚ್ಚುವ ಸಮಯದಲ್ಲಿ ಈ ನಂಬರ್ ನ್ನು ಚಾಸಾ 6 ರವರಿಗೆ ನೀಡಿರುತ್ತೇನೆ. ಅದರಂತೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ</u>

ನಾನು ಮೇಲಿನ ಡೆಮೋ ಸಂಖ್ಯೆ ಮೊಬೈಲ್ ನ್ನು ಚಾಸಾ 6 ರವರಿಗೆ ನೀಡಿಲ್ಲ ಆರೋಪಿಗೆ ಕೊಟ್ಟಿರುತ್ತೇನೆ ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ. 4 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ ಇಲ್ಲಾ</u>

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ